ಇಂದು ದಿ**: 02.08.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

**: ಪಾಟೀಸವಾಲು: ವಾದಿಗಳ ಪರ: ಶ್ರೀ** ಆರ್ ಕೆ **. ,ವಕೀಲರಿಂದ:**

ನನಗೆ ಕಣ್ಣು ಕಾಣಿಸುತ್ತಿದ್ದು, ಕಿವಿಯ ಕೇಳಿಸುತ್ತಿದ್ದು ಆರೋಗ್ಯವಾಗಿ ಇರುತ್ತೇನೆ. ನಾನು 5 ನೇ ತರಗತಿಯವರೆಗೂ ಓದಿರುತ್ತೇನೆ. ಬರೆಯುವುದು ಓದುವುದನ್ನು ಸ್ವಲ್ಪ ಮಾಡುತ್ತೇನೆ. ಇಂದು ನ್ಯಾಯಾಲಯಕ್ಕೆ ನನ್ನನ್ನು 5 ನೇ ಪ್ರತಿವಾದಿಯ ಗಂಡ ಗುರುಸಿದ್ದಪ್ಪ ಕರೆದುಕೊಂಡು ಬಂದಿರುತ್ತಾನೆ. ಹಿಂದೆ ದಿನಾಂಕದಂದು ನಾನು ನ್ಯಾಯಾಲಯಕ್ಕೆ ಬಂದಾಗ ಸದರಿ ಗುರುಸಿದ್ದಪ್ಪ ಕರೆದುಕೊಂಡು ಬಂದಿದ್ದ ಎನ್ನುವುದು ನಿಜ. ಆ ಸಮಯದಲ್ಲಿ ನನ್ನ ಪ್ರಮಾಣ ಪತ್ರವನ್ನು ಅವರು ಮಾಡಿಸಿ, ನನ್ನ ಸಹಿಯನ್ನು ಮಾಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎನ್ನುವುದು ನಿಜ. ಸದರಿ ಪ್ರಮಾಣ ಪತ್ರದಲ್ಲಿ ಅದರಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲಿಲ್ಲ ಹಾಗೇ ಹಾಕಿದರು ಎನ್ನುವುದು ನಿಜ. ಸದರಿ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಈಗಲೂ ನನಗೆ ಗೊತ್ತಿಲ್ಲ ಎನ್ನುವುದು ನಿಜ. ನನಗೆ ವ್ಯವಹಾರ ಜ್ಞಾನ ಚೆನ್ನಾಗಿ ಇರುತ್ತದೆ ಎನ್ನುವುದು ನಿಜ. ನಾನು ಕೂಡ ಊರಲ್ಲಿ ಯಜಮಾನ ಎನ್ನುವುದು ನಿಜ. ನನಗೆ ಯಾವುದೇ ವ್ಯವಹಾರ ಮಾಡಿದರೆ ಅದು ಸರಿ ಇರುತ್ತದೆ ಅಥವಾ ಇಲ್ಲವೆಂದು ತಿಳಿದುಕೊಂಡು ಮಾಡುತ್ತೇನೆ ಎನ್ನುವುದು ನಿಜ. ಆ ವ್ಯವಹಾರ ಸರಿಇಲ್ಲದೇ ಇದ್ದರೆ ಮತ್ತು ಪೂರಕವಾಗಿ ಇಲ್ಲದೆ ಇದ್ದರೆ ನಾನು ಅಂತ ವ್ಯವಹಾರವನ್ನು ಮಾಡುವುದಿಲ್ಲ ಎನ್ನುವುದು ನಿಜ. ನಮ್ಮ ತಂದೆಯ ಹೆಸರು ರಂಗಪ್ಪ. ನಮ್ಮ ಅಜ್ಜನ ಹೆಸರು ಕೋಟಪ್ಪ ಎನ್ನುವುದು ನಿಜ. ನಮ್ಮ ಅಜ್ಜನಿಗೆ ಎಷ್ಟು ಜನ ಅಣ್ಣತಮ್ಮಂದಿರು ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಅಜ್ಜನ ತಂದೆಯ ಹೆಸರು ಗೊತ್ತಿರುವುದಿಲ್ಲ. ಸದರಿ ಕೋಟಪ್ಪನ ತಮ್ಮಂದಿರು ಭೀಮಪ್ಪ ಮತ್ತು ತಿಮ್ಮೇಶಪ್ಪ ಎನ್ನುವುದು ಗೊತ್ತಿರುವುದಿಲ್ಲ. ನಾನು ಮಲಸಿಂಗನಹಳ್ಳಿಯಲ್ಲಿ ಜನಿಸಿರುತ್ತೇನೆ. ನಮ್ಮ ಅಜ್ಜನ ವಂಶಸ್ಥರು ಯಾರ್ಯಾರು ಅವರ ಅಣ್ಣತಮ್ಮಂದಿರು ಮತ್ತು ಮೂಲ ಪುರಷರು ಯಾರು ಎಂದು ತಿಳಿದುಕೊಂಡಿಲ್ಲ. ನಾನು ಮಲಸಿಂಗನಹಳ್ಳಿಯಲ್ಲಿ ಜನಿಸಿದ್ದರಿಂದ ಆ ವಿಷಯಗಳು ನನಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎನ್ನುವುದು ನಿಜ. ನಮ್ಮ ಅಜ್ಜನಿಗೆ ಇಬ್ಬರು ಗಂಡು ಮಕ್ಕಳು ಅವರು ರಂಗಪ್ಪ ಮತ್ತು ನಾಶಪ್ಪ. ಸದರಿ ನಾಶಪ್ಪ ನಮ್ಮ ಅಜ್ಜನ ಹಿರಿಯ ಮಗ. ನಮ್ಮ ತಂದೆ ನಮ್ಮ ಅಜ್ಜನಿಗೆ ಅಣ್ಣ ಮಗ. ಸದರಿ ನಾಶಪ್ಪನಿಗೆ ಒಬ್ಬ ಗಂಡು ಮಗ ಇರುತ್ತಾರೆ. ಅವನು ಹನುಮಂತಪ್ಪ. ಸದರಿ ಹನುಮಂತಪ್ಪನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು. ಸದರಿ ಹನುಮಂತಪ್ಪನ ಗಂಡು ಮಕ್ಕಳು ಚಂದ್ರಪ್ಪ ಮತ್ತು ರಾಮಪ್ಪ ಹಾಗೂ ಮಗಳ ಹೆಸರು ಶಿವಮ್ಮ. ನಮ್ಮ ತಂದೆ ನಾವು 4 ಜನ ಮಕ್ಕಳು. ಅವರು ನಾಗೇಂದ್ರಪ್ಪ, ಶರಣಪ್ಪ, ಆಂಜನೇಯ ಮತ್ತು ದ್ಯಾಮಪ್ಪ. 1 ನೇ ಪ್ರತಿವಾದಿ ನಾಗೇಂದ್ರಪ್ಪನ ಹೆಂಡತಿ ರಂಗಮ್ಮ. ಅವರಿಗೆ ಮಾದಮ್ಮ, ರತ್ನಮ್ಮ,ಕೋಟಪ್ಪ ಮತ್ತು ಸುಮಿತ್ರಮ್ಮ ಎಂಬ ನಾಲ್ಕು ಜನ ಮಕ್ಕಳು. ಸದರಿ ಕೋಟಪ್ಪನ ಹೆಂಡತಿ ಕೆಂಚಮ್ಮ. ನನ್ನ

ಹೆಂಡತಿಯ ಹೆಸರು ಓಂಕಾರಮ್ಮ. ನನಗೆ ಇಬ್ಬರು ಮಕ್ಕಳು. ಅವರು ಉಮಾಪತಿ ಮತ್ತು ವೆಂಕಟೇಶ. ಸದರಿ ಉಮಾಪತಿಯ ಹೆಂಡತಿಯ ಹೆಸರು ರಮಾದೇವಿ. ವೆಂಕಟೇಶನ ಹೆಂಡತಿಯ ಹೆಸರು ಪ್ರೇಮಾ. ಆಂಜಿನಪ್ಪ ನನ್ನ ಮೊದಲ ತಮ್ಮ. ಸದರಿ ಆಂಜಿನಪ್ಪನ ಹೆಂಡತಿಯ ಹೆಸರು ಕಮಲಮ್ಮ. ಸದರಿ ಕಮಲಮ್ಮ ಮೃತಪಟ್ಟಿರುತ್ತಾಳೆ. ಸದರಿ ಆಂಜಿನಪ್ಪ ಮತ್ತು ಕಮಲಮ್ಮ ಇವರಿಗೆ ಇಬ್ಬರು ಹೆಣ್ಣು ಮಕ್ಕಳು ಮೂರು ಜನ ಗಂಡು ಮಕ್ಕಳು. ಸದರಿಯವರು ಲಲಿತಮ್ಮ, ಬಸವರಾಜು, ದಯಾನಂದಸ್ವಾಮಿ, ಪ್ರಕಾಶ ಮತ್ತು ಶೈಲಜ. ಸದರಿ ಲಲಿತಮ್ಮ ಇವಳನ್ನು ಮಾಯಕೊಂಡ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಬಸವರಾಜಪ್ಪ ನ ಹೆಂಡತಿಯ ಹೆಸರು ಪಾರ್ವತಮ್ಮ. ದಯಾನಂದ ಇವನ ಹೆಂಡತಿಯ ಹೆಸರು ಮಧು. ಪ್ರಕಾಶ್ ಇವರ ಹೆಂಡತಿಯ ಹೆಸರು ನಯನ. ಆಂಜಿನಪ್ಪನ ಮಕ್ಕಳಾದ 5 ಜನರು ಭಾಗ ಕೇಳಿ ಕೇಸನ್ನು ಸಲ್ಲಿಸಿರುತ್ತಾರೆ ಎನ್ನುವುದು ನಿಜ. ನನ್ನ ಎರಡನೇ ತಮ್ಮನ ಹೆಸರು ದ್ಯಾಮಣ್ಣ. ಅವನ ಹೆಂಡತಿಯ ಹೆಸರು ಲಲಿತಮ್ಮ. ಸದರಿ ದ್ಯಾಮಪ್ಪ ಮತ್ತು ಲಲಿತಮ್ಮ ಇವರಿಗೆ 3 ಜನ ಮಕ್ಕಳು. ಅವರು ನಾಗರಾಜ, ಸವಿತ ಮತ್ತು ಲತಾ. ನಾಗರಾಜ ಇವನ ಹೆಂಡತಿಯ ಹೆಸರು ಗಿರಿಜಮ್ಮ. ಸವಿತ ಇವಳನ್ನು ಗೂಳಿಹೊಸಳ್ಳಿ ಗೆ ಕೊಟ್ಟು ಮದುವೆ ಮಾಡಿರುತ್ತಾರೆ. ನಮ್ಮ ಅಜ್ಜನ ತಮ್ಮ ಭೀಮಪ್ಪ. ಸದರಿ ಭೀಮಪ್ಪ ಮತ್ತು ಅವನ ಹೆಂಡತಿ ತೊಳಸಮ್ಮ ಮಕ್ಕಳು ಇಲ್ಲದೇ ಮೃತಪಟ್ಟಿರುತ್ತಾರೆ ಎನ್ನುವುದು ನಿಜ. ಭೀಮಪ್ಪನ ಹಿರಿಯ ಸಹೋದರ ತಿಮ್ಮೇಶಪ್ಪ. ಸದರಿ ತಿಮ್ಮೇಶಪ್ಪ ಮತ್ತು ಅವನ ಹೆಂಡತಿ ಲಕ್ಕಮ್ಮ ಇಬ್ಬರು ಮೃತಪಟ್ಟಿರುತ್ತಾರೆ ಎನ್ನುವುದು ನಿಜ. ಸದರಿ ತಿಮ್ಮೇಶಪ್ಪ ಮತ್ತು ಅವನ ಹೆಂಡತಿ ಲಕ್ಕಮ್ಮ ಇವರ ಮಕ್ಕಳು ಕರಿಯಪ್ಪ, ಕೋಟಪ್ಪ ಮತ್ತು ಚಂದ್ರಪ್ಪ. ಸದರಿ ಕರಿಯಪ್ಪನ ಮಗ ರಂಗಸ್ವಾಮಿ ಜೀವಂತ ಇರುತ್ತಾನೆ. ಕೋಟಪ್ಪ ಮತ್ತು ಅವನ ಹೆಂಡತಿ ರಾಮಕ್ಕ ಮೃತಪಟ್ಟಿರುತ್ತಾರೆ. ಅವರ ಮಕ್ಕಳಾದ ಚಂದ್ರಮ್ಮ ಲಕ್ಕಮ್ಮ ಜೀವಂತ ಇರುತ್ತಾರೆ ಎನ್ನುವುದು ನಿಜ. ಸದರಿ ಚಂದ್ರಪ್ಪ ಮತ್ತು ಅವನ ಹೆಂಡತಿ ರಂಗಮ್ಮ ಇಬ್ಬರು ಮೃತಪಟ್ಟಿದ್ದು. ಅವರ ಮಗ ತಿಪ್ಪೇಸ್ವಾಮಿ ಮತ್ತು ಹೆಂಡತಿ ರಾಜಮ್ಮ ಎನ್ನುವವರು ಇರುತ್ತಾರೆ ಎನ್ನುವುದು ನಿಜ.

ನಮ್ಮ ತಂದೆಯ ತಂದೆ ಕೋಟಪ್ಪ ಇವನು ಹೊಸದುರ್ಗ ತಾಲ್ಲೂಕು ನಾಕಿಕೆರೆ ಗ್ರಾಮದವನು. ನಮ್ಮ ತಂದೆ ಮತ್ತು ಅವರ ಅಣ್ಣತಮ್ಮಂದಿರು ಹಾಗೂ ಅವರ ಮೂಲ ವಂಶದವರು ನಾಕಿಕೆರೆ ಗ್ರಾಮದವರು ಎನ್ನುವುದು ನಿಜ. ನಮ್ಮ ತಂದೆ ಮಲಸಿಂಗನಹಳ್ಳಿಯಲ್ಲಿ ಮದುವೆ ಆಗಿರುತ್ತಾನೆ. ನಮ್ಮ ತಾಯಿ ಯಾರ ಮಗಳೆಂದು ನೆನಪು ಇರುವುದಿಲ್ಲ. ನಮ್ಮ ತಾಯಿಯ ಹೆಸರು ಹನುಮಮ್ಮ. ಹನುಮಮ್ಮಳನ್ನು ಮದುವೆಯಾದ ನಂತರ ನಾಕಿಕೆರೆ ಗ್ರಾಮದಿಂದ ಮಲಸಿಂಗನಹಳ್ಳಿ ಗ್ರಾಮಕ್ಕೆ ಬಂದು ನೆಲೆಸಿದ ಎನ್ನುವುದು ನಿಜ. ನಮ್ಮ ತಾಯಿಯ ತವರು ಮನೆ ಆಸ್ತಿ ಅಲ್ಲಿ ಇದ್ದ ಕಾರಣ, ನೋಡಿಕೊಳ್ಳುವ ಸಲುವಾಗಿ ನಮ್ಮ ತಂದೆ ಮನೆಯ ಅಳಿಯನಾಗಿ ಮಲಸಿಂಗನಹಳ್ಳಿಗೆ ಬಂದಿರುತ್ತಾನೆ ಎನ್ನುವುದು ನಿಜ. ಮಲಸಿಂಗನಹಳ್ಳಿಗೆ ಬಂದ ನಂತರ ನಾವು ಜನಿಸಿ ಅಲ್ಲೇ ವಾಸವಾಗಿರುತ್ತೇವೆ ಎನ್ನುವುದು ನಿಜ. ನಮ್ಮ ತಂದೆ ಮಲಸಿಂಗನಹಳ್ಳಿಯಲ್ಲಿ ನಮ್ಮ ತಾಯಿಯ ತವರು ಮನೆ ಆಸ್ತಿಗಳನ್ನು ನೋಡಿಕೊಂಡಿದ್ದು, ಕೋಟಪ್ಪನ ಮಗ ನಾಶಪ್ಪ ಮತ್ತು

ತಿಮ್ಮೇಶಪ್ಪ ಮತ್ತು ತಿಮ್ಮೇಶಪ್ಪನ ಮಕ್ಕಳು ನಾಕಿಕೆರೆ ಗ್ರಾಮದಲ್ಲಿರುವ ಪಿತ್ರಾರ್ಜಿತ ಆಸ್ತಿಗಳನ್ನು ನೋಡಿಕೊಂಡಿದ್ದರು ಎನ್ನುವುದು ನಿಜ. ನಾಕಿಕೆರೆ ಗ್ರಾಮದ ಸರ್ವೇನಂ. 39 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದು ಗೊತ್ತಿರುವುದಿಲ್ಲ. 6 ಎಕರೆ ನಮ್ಮ ಭಾಗಕ್ಕೆ ಬಂದಿರುತ್ತದೆ. ನಾಕಿಕೆರೆ ಗ್ರಾಮದಲ್ಲಿ ಪಿತ್ರಾರ್ಜಿತವಾಗಿ ಸರ್ವೇ ನಂ. 85,90/2,90/3,31,31/1 ಎ,31/2 ಎ ಮತ್ತು 39 ರ ಜಮೀನುಗಳು ಇದ್ದವು ಎನ್ನುವುದು ನಿಜ. ನಮ್ಮ ತಾಯಿಯ ತವರು ಮನೆಯ ಆಸ್ತಿಗಳನ್ನು ನಾವು 4 ಜನ ಸಹೋದರರು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆ ಎನ್ನುವುದು ನಿಜ. ನಿಪಿಃ 7 ರ ಪ್ರಕಾರ 1999-2000 ನೇ ಇಸವಿಯಲ್ಲಿ ನಾವು ಅಣ್ಣತಮ್ಮಂದಿರು ಜುಬಾನಿ ಪಾಲು ಪಾರಿಕತ್ ಮಾಡಿಕೊಂಡಿರುತ್ತೇನೆ ಎನ್ನುವುದು ನಿಜ. ಸದರಿ ಪಾಲು ವಿಭಾಗದಲ್ಲಿ ನನ್ನ ಭಾಗಕ್ಕೆ 4 ಎಕರೆ 10 ಗುಂಟೆ ಜಮೀನು ಬಂದಿರುತ್ತದೆ. ತಾಳ್ಯ ಗ್ರಾಮದ ಸರ್ವೇ ನಂ. 45/4 ರಲ್ಲಿ 3 ಎಕರೆ 2 ಗುಂಟೆ ನನ್ನ ಭಾಗಕ್ಕೆ ಬಂದಿರುತ್ತದೆ ಎನ್ನುವುದು ನಿಜ. ಮಲಸಿಂಗನಹಳ್ಳಿ ಗ್ರಾಮದ ಸರ್ವೇ ನಂ. 29/3 ರಲ್ಲಿ 1 ಎಕರೆ 12 ಗುಂಟೆ ನನ್ನ ಭಾಗಕ್ಕೆ ಬಂದಿರುತ್ತದೆ ಎನ್ನುವುದು ನಿಜ. ಸರ್ವೇ ನಂ. 44/1 ರಲ್ಲಿ ನನಗೆ 10 ಗುಂಟೆ ಜಮೀನು ಬಂದಿತ್ತು, ಅದನ್ನು 3 ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ನನಗೆ ಪಾಲುವಿಭಾಗದಲ್ಲಿ 5 ಎಕರೆ ಬಂದಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಹೋದರರಾದ ಆಂಜಿನಪ್ಪನಿಗೆ 3 ಎಕರೆ ಹಾಗೂ ದ್ಯಾಮಣ್ಣನಿಗೆ ಮೂರುವರೆ ಎಕರೆ ಜಮೀನು ಬಂದಿರುತ್ತದೆ. ನಾಗೇಂದ್ರಪ್ಪನಿಗೆ ಸರ್ವೇ ನಂ.26/1 ರಲ್ಲಿ 3 ಎಕರೆ 14 ಗುಂಟೆ, ಸರ್ವೇ ನಂ.44/1 ರಲ್ಲಿ 15 ಗುಂಟೆ ಜಮೀನು ಬಂದಿರುತ್ತದೆ ಎನ್ನುವುದು ನಿಜ. ನಮ್ಮ ತಾಯಿಯ ತವರು ಮನೆಯ ಆಸ್ತಿಗಳಲ್ಲಿ ಭಾಗ ಮಾಡಿಕೊಳ್ಳುವುದು ಯಾವುದು ಉಳಿದಿಲ್ಲ ಎನ್ನುವುದು ನಿಜ. 2005-06 ರಲ್ಲಿ ನಾಕಿಕೆರೆ ಗ್ರಾಮದ ಆಸ್ತಿಗಳನ್ನು ಭಾಗ ಮಾಡಿಕೊಂಡಿರುತ್ತೇವೆ. ಆ ಸಮಯದಲ್ಲಿ ನಮ್ಮ ತಂದೆ ತಾಯಿ, ನಮ್ಮ ಅಜ್ಜ ಮೃತಪಟ್ಟಿದ್ದು, ನಾವು 4 ಜನ ಅಣ್ಣ ತಮ್ಮಂದಿರು, ನಮ್ಮ ದೊಡ್ಡಪ್ಪನ ಮಗನ ಮಕ್ಕಳು, ತಿಮ್ಮೇಶಪ್ಪನ ಮೊಮ್ಮಕ್ಕಳು ಮಾತ್ರ ಜೀವಂತ ಇದ್ದೇವು ಎನ್ನುವುದು ನಿಜ. ಸದರಿ ಪಾಲು ವಿಭಾಗದಲ್ಲಿ ನಾಕಿಕೆರೆ ಗ್ರಾಮದ ಸರ್ವೇ ನಂ.39 ರಲ್ಲಿ 6 ಎಕರೆ ಜಮೀನನ್ನು ನಮ್ಮ ಅಣ್ಣ ನನಗೆ ಮಾಡಿಸಿಕೊಟ್ಟಿರುತ್ತಾನೆ. ನಮ್ಮ ಅಣ್ಣ ಎಂದರೆ ನಮ್ಮ ದೊಡ್ಡಪ್ಪನ ಮಗ ಹನುಮಂತಪ್ಪ. ಸದರಿ ಹನುಮಂತಪ್ಪ ಮತ್ತು ಅವನ ಹೆಂಡತಿ ಮೃತಪಟ್ಟಿರುತ್ತಾರೆ ಎನ್ನುವುದು ನಿಜ. ನಮ್ಮ ತಂದೆಯ ಭಾಗಕ್ಕೆ ಒಟ್ಟು 6 ಎಕರೆ ಜಮೀನು ಬಂದಿದ್ದು, ನಮ್ಮ 4 ಜನ ಸಹೋದರರ ಹೆಸರಿಗೆ ಖಾತೆ ಆಗಿರುತ್ತದೆ ಎನ್ನುವುದು ನಿಜ. ಇದು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿ ಎನ್ನುವುದು ನಿಜ. ನಿಪಿಃ 6 ರ ಪ್ರಕಾರ ನನಗೆ ಭಾಗ ಬಂದಿರುತ್ತದೆ ಎನ್ನುವುದು ನಿಜ. ನಿಪಿಃ 5 ರ ಪ್ರಕಾರ ಖಾತೆಯಾಗಿ ಪ್ರತ್ಯೇಕವಾಗಿ ಪಹಣಿ ಬಂದಿರುತ್ತವೆ ಎನ್ನುವುದು ನಿಜ.

ವಾದಿಗಳ ತಂದೆ 3 ನೇ ಪ್ರತಿವಾದಿಗೆ ಈಗ 4 ವರ್ಷಗಳಿಂದ ಬುದ್ಧಿ ಭ್ರಮಣೆ ಆಗಿರುತ್ತದೆ. 3 ನೇ ವಾದಿ ವ್ಯವಸಾಯ ಮತ್ತು ಎಲ್ ಐ ಸಿ ಯಲ್ಲಿ ಏಜೆಂಟ್ ಆಗಿ ಕೆಲಸ ಮಾಡುತ್ತಾನೆ. 2 ನೇ ವಾದಿ ಶಿವಮೊಗ್ಗದ ಪಶು ವೈದ್ಯಕೀಯ ಕಾಲೇಜಿನಲ್ಲಿ ಸುಪರ್ ಡೆಂಟ್ ಆಗಿ ಕೆಲಸ ಮಾಡುತ್ತಿದ್ದಾನೆ ಎನ್ನುವುದು ನಿಜ. 1 ನೇ ವಾದಿ ಬೆಂಗಳೂರಿನ ಟಾಟಾ ಸೋಲಾರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ ಎನ್ನುವುದು ನಿಜ. ಅವರೆಲ್ಲ ಅಲ್ಲಲ್ಲಿ ಇದ್ದುಕೊಂಡು ಜೀವನ ಮಾಡುತ್ತಿದ್ದಾರೆ ಎನ್ನುವುದು ನಿಜ. 3 ನೇ ಪ್ರತಿವಾದಿ ನಿವೃತ್ತನಾಗಿದ್ದು, ಅವನಿಗೆ ಸರ್ಕಾರದಿಂದ ನಿವೃತ್ತಿ ವೇತನ ಬರುತ್ತದೆ ಎನ್ನುವುದು ನಿಜ. ಅವರಿಗೆ ಬರುತ್ತಕ್ಕಂತಹ ವರಮಾನ ಅವರಿಗೆ ಸಾಕಾಗುವಷ್ಟು ಇದೆ ಎನ್ನುವುದು ನಿಜ. ಅವರಿಗೆ ಅವರ ಮನೆತನದ ಆಸ್ತಿಗಳನ್ನು ಮಾರಾಟ ಮಾಡುವ ಸಂದರ್ಭ ಬಂದಿಲ್ಲ ಎಂದರೆ ಸಾಕ್ಷಿ ಏಕೆ ಮಾರಾಟ ಮಾಡಿದರು ಎಂದು ಹೇಳುತ್ತಾರೆ. ಮಾರಾಟ ಮಾಡುವ ಸಂದರ್ಭ ಅವರಿಗೆ ಬಂದಿರಲಿಲ್ಲ ಎಂದರೆ ಸಾಕ್ಷಿ ಬಂದಿತ್ತು ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಂದರ್ಭ ಏನು ಬಂದಿತ್ತು ಎಂದರೆ ಸಾಕ್ಷಿ ಅವರ ಮಗ 3 ನೇ ವಾದಿ ಸಾಲ ಮಾಡಿದ್ದ, 4 ನೇ ಪ್ರತಿವಾದಿಯ ಮಗನೂ ಸಾಲ ಮಾಡಿದ್ದ, ಅದಕ್ಕೆ ಬಂದಿತ್ತು ಎಂದು ಹೇಳುತ್ತಾರೆ. ನನಗೆ ಮತ್ತು 1 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಮಸ್ಯೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ತೋಟಕ್ಕೆ ಬೋರ್ ವೆಲ್ ಹಾಕಿಸುವ ಸಲುವಾಗಿ ಮಾರಾಟ ಮಾಡಿರುತ್ತೇನೆ. ನಮಗೋಸ್ಕರ 1 ನೇ ಪ್ರತಿವಾದಿಯೂ ಮಾರಾಟ ಮಾಡಿರುತ್ತಾನೆ. ಸದರಿ ವಿಷಯವನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದ ಕ್ರಯದ ಕರಾರು ಪತ್ರದಲ್ಲಿ ಬರೆಸಿಲ್ಲ, ಅದನ್ನು ಏಕೆ ಬರೆಸಬೇಕು. 3 ನೇ ವಾದಿ ಎಲ್ಲೆಲ್ಲಿ ಸಾಲ ಮಾಡಿದ್ದ ಎಂದು ದಾಖಲೆಯನ್ನು ಹಾಜರು ಮಾಡಿಲ್ಲ, ಸ್ವಾಭಾವಿಕವಾಗಿ ಮಾತನಾಡುವಾಗ ಸಾಲ ಇದೆ ಎಂದು ಹೇಳಿರುವುದನ್ನು ಹೇಳುತ್ತಿದ್ದೇನೆ. 3 ನೇ ವಾದಿಯೇ ಸಾಲ ಇದೆ ಎಂದು ನನಗೆ ಹೇಳಿರುತ್ತಾನೆ. ಆ ರೀತಿ ಹೇಳಿ ಈಗ 6 ವರ್ಷ ಆಗಿರುತ್ತದೆ. ಅವನು ಎಲ್ಲಿ, ಯಾರಿಂದ ಸಾಲ ಮಾಡಿರುತ್ತಾನೆ ಎಷ್ಟು ಸಾಲ ಮಾಡಿರುತ್ತಾನೆ ಮತ್ತು ಅವನ ಸಾಲದ ಬಗ್ಗೆ ಗೊತ್ತಿರುವುದಿಲ್ಲ. 3 ನೇ ವಾದಿ ಸಾಲ ಇದೆ ಎಂದು ನನ್ನ ಬಳಿ ಹೇಳಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ವಾದಿಗೆ ಬೇರೆಯವರ ಹತ್ತಿರ ಸಾಲ ಮಾಡುವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ. 3 ನೇ ವಾದಿ ಎಲ್ಲಿ, ಯಾರಿಂದ, ಏಕೆ ಸಾಲ ಮಾಡಿದ್ದ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎನ್ನುವುದು ನಿಜ. ನಾನು ಮತ್ತು 3 ನೇ ವಾದಿ ಸೇರಿ ಅವರ ಮನೆಯಲ್ಲಿ ಮಾತನಾಡಿರುತ್ತೇವೆ. ಆ ಸಮಯದಲ್ಲಿ ನಾನು ಮತ್ತು 3 ನೇ ವಾದಿ ಮಾತ್ರ ಇದ್ದೇವು. ಬೇಜಾರು ಕಳೆಯಲು 3 ನೇ ವಾದಿಯ ಮನೆಯ ಹತ್ತಿರ ಜಾಗದಲ್ಲಿ ಚಿಲ್ಲರ ಅಂಗಡಿಯನ್ನು ಹಾಕಿಕೊಂಡಿರುತ್ತೇನೆ ಎನ್ನುವುದು ನಿಜ. 3 ನೇ ವಾದಿಯ ಜಾಗದಲ್ಲಿ ನಾನು ಸದರಿ ಅಂಗಡಿಯನ್ನು ಹಾಕಿಕೊಂಡಿದ್ದು, ಅದನ್ನು ತೆಗೆಯಲು ಪೊಲೀಸರು ಮತ್ತು ಪಿ.ಡಿ.ಓ ಹೇಳಿದ್ದರು ಎಂದರೆ ಸಾಕ್ಷಿ ನಮಗೆ ಹೇಳಿಲ್ಲ ಗಂಗಮ್ಮನಿಗೆ ಹೇಳಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಾಗ 3 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸಾಕ್ಷಿ ಅದು

ಪಂಚಾಯಿತಿಗೆ ಸೇರಿದ್ದು ಎಂದು ಹೇಳುತ್ತಾರೆ. ಸದರಿ ಜಾಗ ಬಿಟ್ಟುಕೊಡು ಎಂದು ಕೇಳಿದ್ದಕ್ಕೆ 3 ನೇ ವಾದಿ 1 ಲಕ್ಷ ರೂ. ಸಾಲ ಮಾಡಿದ್ದ ಎಂದು ನನ್ನ ಮುಂದೆ ಹೇಳಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೂ ಮತ್ತು 3 ನೇ ಪ್ರತಿವಾದಿಯ ಮಕ್ಕಳಿಗೂ ಸಂಬಂಧ ಸರಿಯಲ್ಲ ಎಂದರೆ ಸಾಕ್ಷಿ ಸ್ವಲ್ಪ ಮನಸ್ತಾಪ ಇದೆ ಎಂದು ಹೇಳುತ್ತಾರೆ. 3-4 ವರ್ಷದಿಂದ ಮನಸ್ತಾಪ ಇದೆ.

4 ನೇ ಪ್ರತಿವಾದಿಯ ಮಗ ನಾಗರಾಜ. ಸದರಿ ನಾಗರಾಜ ಯಾರ ಬಳಿ ಏಕೆ ಸಾಲ ಮಾಡಿರುತ್ತಾನೆ ಎಂದು ತಿಳಿದುಕೊಂಡಿಲ್ಲ. ಸದರಿ ನಾಗರಾಜ ಸಾಲ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ನಾಗರಾಜ ಮತ್ತು ಬಸವರಾಜ ಯಾವುದೇ ಸಾಲ ಮಾಡದ ಕಾರಣ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನೇಕೆ ಅವರ ದಾಖಲೆಗಳನ್ನು ಹಾಜರುಪಡಿಸಲಿ ಎಂದು ಹೇಳುತ್ತಾರೆ. ನಾಗರಾಜ ಸಾಲ ಇದೆ ಎಂದು ಬಂದು ನನ್ನ ಬಳಿ ಎಂದೂ ಹೇಳಿಲ್ಲ ಎಂದರೆ ಸರಿಯಲ್ಲ. ನಾಗರಾಜ ಮತ್ತು ಬಸವರಾಜ ಹೇಳಿದ್ದನ್ನ ಬಿಟ್ಟರೆ ಅವರ ವೈಯಕ್ತಿಕ ಸಾಲದ ಬಗ್ಗೆ ನನಗೆ ಯಾವುದು ಗೊತ್ತಿಲ್ಲ ಎನ್ನುವುದು ನಿಜ.

ನೀವು ಈಗಲೇ ಸಾಲ ಮಾಡಿದ್ದೀರಿ ಅದನ್ನು ಹೇಳಿ ಇಲ್ಲ ಅಂದರೆ ನಾನು ಕ್ರಯ ಪತ್ರ ಬರೆಸುವುದಿಲ್ಲ ಎಂದು ಕೇಳಿದ್ದೀಯ ಎಂದರೆ ಸಾಕ್ಷಿ ಅವರು ಹಣ ತೆಗೆದುಕೊಂಡಿದ್ದರು ಎಂದು ಹೇಳುತ್ತಾರೆ. ಎಲ್ಲೆಲ್ಲಿ ಸಾಲ ಮಾಡಿದ್ದೀರಿ ಅದನ್ನು ಹೇಳಿ ಇಲ್ಲ ಅಂದರೆ ನಾನು ಕ್ರಯ ಪತ್ರ ಬರೆಸುವುದಿಲ್ಲ ಎಂದು ಕೇಳಿದ್ದೀಯ ಎಂದರೆ ಸಾಕ್ಷಿ ನನ್ನ ಹಾಗೆ ಅವರು, ಅವರ ಹಾಗೆ ನಾನು ಇದ್ದ ಕಾರಣ ಕೇಳಿಲ್ಲ ಎಂದು ಹೇಳುತ್ತಾರೆ. ನನ್ನ ಹಾಗೆ ಅವರು, ಅವರ ಹಾಗೆ ನಾನು ಇದ್ದ ಕಾರಣ ಏನು ಕೇಳದೆ ಹಣ ತೆಗೆದುಕೊಂಡಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮತ್ತು 5 ನೇ ಪ್ರತಿವಾದಿಯ ಗಂಡ ಈಗ 5-6 ವರ್ಷಗಳಿಂದ ಜಮೀನು ಖರೀದಿಯ ಸಲುವಾಗಿ ಪರಿಚಯ. ನಾನು ಬೋರ್ ವೆಲ್ ತೆಗೆಸುವ ಸಲುವಾಗಿ ಹಣದ ಸಲುವಾಗಿ ಮಾರಾಟ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು 5 ನೇ ಪ್ರತಿವಾದಿಯ ಗಂಡನಿಗೂ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ. ನಾಕಿಕೆರೆ ರಂಗಸ್ವಾಮಿಯ ಕಡೆಯಿಂದ ನನಗೆ 5 ನೇ ಪ್ರತಿವಾದಿಯ ಗಂಡ ಪರಿಚಯ. ಸದರಿ ರಂಗಸ್ವಾಮಿಯ ತಂದೆಯ ಹೆಸರು ಕರಿಯಪ್ಪ. ಕ್ರಯದ ಕರಾರು ಪತ್ರಕ್ಕೆ ಸದರಿ ರಂಗಸ್ವಾಮಿ ಇವನು ಸಾಕ್ಷಿಯಾಗಿ ಸಹಿ ಮಾಡಿಲ್ಲ. ಸದರಿ ಕರಾರು ಪತ್ರ ಆಗುವಾಗ ರಂಗಸ್ವಾಮಿ ಇರಲಿಲ್ಲ. ನಾವು ಅವರು ಅಣ್ಣತಮ್ಮಂದಿರು ವ್ಯವಹಾರದಲ್ಲಿ ಬೆರೆಯುತ್ತಿದ್ದೇವು ಮೊದಲಿನಿಂದಲೂ ಗೊತ್ತು.

ಮುಂದುವರೆದ ಪಾಟೀ ಸವಾಲು ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.